# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 553 |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22.12.2022 |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಯವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪಂಚಾಯತಿಗಳ ಉತ್ತಮ ಆಡಳಿತ ವ್ಯವಸ್ಥೆಗೆ ಉತ್ತೇಜನಕ್ಕಾಗಿ ಎಂಟು ವರ್ಷಗಳ ಹಿಂದೆ ರೂಪಿಸಿದ್ದ "ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ" ಯನ್ನು ನೀಡಬೇಕಾದರೆ ಇರುವ ಮಾನದಂಡಗಳು ಯಾವುದು; | ಗ್ರಾಮ ಪಂಚಾಯಿತಿಗಳು ಸ್ಥಳೀಯ ಮಟ್ಟದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕೆಂಬ ಸದುದ್ದೇಶದಿಂದ ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿಗಳನ್ನು ಪ್ರೋತ್ಸಾಹಿಸಲು 2013–14ನೇ ಸಾಲಿನಿಂದ ಪ್ರತಿ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯಿತಿಯನ್ನು ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಿ ರೂ.5.00 ಲಕ್ಷಗಳ ಪ್ರೋತ್ಸಾಹ ಧನ ನೀಡಿ ಗೌರವಿಸಲಾಗುತ್ತಿದೆ.<br><br>2020–21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡುವ ಸಂಬಂಧ 250 ಅಂಕಗಳ ಪ್ರಶ್ನಾವಳಿಗಳನ್ನು Google Form ತಂತ್ರಾಂಶದಿಂದ ಉತ್ತರಿಸುವ ಮೂಲಕ ರಾಜ್ಯದ ಗ್ರಾಮ ಪಂಚಾಯಿತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಅದರಂತೆ, ರಾಜ್ಯದ ಗ್ರಾಮ ಪಂಚಾಯಿತಿಗಳು ಅರ್ಜಿ ಸಲ್ಲಿಸಿದ್ದು, ಈ ಗ್ರಾಮ ಪಂಚಾಯಿತಿಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿರುವ ತಾಲ್ಲೂಕಿಗೆ ಐದು ಗ್ರಾಮ ಪಂಚಾಯಿತಿಗಳನ್ನು ಪ್ರಾಥಮಿಕ ಹಂತದಲ್ಲಿ ಆಯ್ಕೆ ಮಾಡಿ, ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಲಾಗಿತ್ತು.<br><br>ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದ ತಂಡವು ಮಾರ್ಗಸೂಚಿಗಳನುಸಾರ ಸ್ಥಳ/ದಾಖಲೆಗಳನ್ನು ಪರಿಶೀಲನೆ ಮಾಡಿ, ವರದಿಯನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸಲಾಗಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದ ಆಯ್ಕೆ ಸಮಿತಿಯು ಹಳೆಯ 176 ತಾಲ್ಲೂಕುಗಳಿಗೆ ಮಿತಿಗೊಳಿಸಿ, ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯಿತಿಗಳನ್ನು ಗಾಂಧಿ ಗ್ರಾಮ ಪುರಸ್ಕಾರಕ್ಕಾಗಿ ಆಯ್ಕೆ ಮಾಡಿ ಶಿಫಾರಸ್ಸು ಮಾಡಿರುತ್ತದೆ. |

| | | |
|---|---|---|
| | | ಅದರಂತೆ, ಪ್ರಸ್ತುತ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದ ಆಯ್ಕೆ ಸಮಿತಿಯ ಮೂಲಕ ಶಿಫಾರಸ್ಸು ಮಾಡಲಾದ ಪ್ರತಿ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯಿತಿಗಳನ್ನು ರಾಜ್ಯ ಮಟ್ಟದ ಪರಾಮರ್ಶೆ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದಿಸಿ 2020-21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಿ ಪ್ರತಿ ಗ್ರಾಮ ಪಂಚಾಯಿತಿಗೆ ರೂ.5.00 ಲಕ್ಷಗಳಂತೆ ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ. |
| (ಆ) | 2019-20 ಮತ್ತು 2020-21ನೇ ಸಾಲಿನಲ್ಲಿ ಈ ಪ್ರಶಸ್ತಿಗೆ ಭಾಜಿನವಾದ ಗ್ರಾಮ ಪಂಚಾಯತಿಗಳಿಗೆ ಕೋವಿಡ್ ಕಾರಣ ನೀಡಿ ಪ್ರಶಸ್ತಿ ಹಣವನ್ನು ಇಲ್ಲಿಯವರೆಗೂ ನೀಡದಿರಲು ಕಾರಣವೇನು; | 2019-20ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಪ್ರತಿ ತಾಲ್ಲೂಕಿಗೆ ಒಂದರಂತೆ ಒಟ್ಟು 176 ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿರುವುದಿಲ್ಲ ಮತ್ತು ಕೋವಿಡ್-19 ಹಿನ್ನೆಲೆಯಲ್ಲಿ ಪುರಸ್ಕಾರ ಅನುದಾನ ನೀಡಿರುವುದಿಲ್ಲ.<br>ಗ್ರಾಮ ಪಂಚಾಯಿತಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಾಸನಬದ್ಧ ಅನುದಾನ, 15ನೇ ಹಣಕಾಸು ಆಯೋಗದ ಅನುದಾನ, ಸ್ವಚ್ಛ ಭಾರತ್ ಮಿಷನ್ ಮತ್ತು ಜಲ ಜೀವನ್ ಮಿಷನ್ ಯೋಜನೆಯಡಿ ಅನುದಾನಗಳನ್ನು ಒದಗಿಸಲಾಗುತ್ತಿದೆ. ಆದುದರಿಂದ ಗ್ರಾಮ ಪಂಚಾಯಿತಿಯ ಆಡಳಿತವು ಕುಂಟಿತವಾಗಿರುವುದಿಲ್ಲ.<br>ಸರ್ಕಾರದ ಆದೇಶ ಸಂಖ್ಯೆ: ಕೆಪಿಆರ್‌ಸಿ-ಡಿಇವಿ 335 2022, ದಿನಾಂಕ:21.09.2022 ರಲ್ಲಿ 2020-21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಿ, ಪ್ರತಿ ಗ್ರಾಮ ಪಂಚಾಯಿತಿಗೆ ರೂ.5.00 ಲಕ್ಷಗಳಂತೆ ಒಟ್ಟು ರೂ. 8.80 ಕೋಟಿಗಳನ್ನು ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ.<br>ಆದೇಶದ ಪ್ರತಿಯನ್ನು ಅನುಬಂಧದಲ್ಲಿ ನೀಡಿದೆ. |
| (ಇ) | ಹೀಗೆ ಉತ್ತೇಜಿತ ಪ್ರಶಸ್ತಿಯ ಹಣವನ್ನು ಎರಡು ಮೂರು ವರ್ಷಗಳವರೆಗೆ ನೀಡದಿದ್ದಲ್ಲಿ ಗ್ರಾಮ ಪಂಚಾಯತಿಗಳ ಆಡಳಿತ ಕಾರ್ಯವೈಖರಿಯಲ್ಲಿ ಕುಂಟಿತವಾಗುವುದಿಲ್ಲವೇ; ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | |
| (ಈ) | ಯಾವ ಕಾಲಮಿತಿಯೊಳಗೆ ಈ ಎರಡು ವರ್ಷಗಳಲ್ಲಿ ಪ್ರಶಸ್ತಿಗೆ ಭಾಜನವಾದ ಗ್ರಾಮ ಪಂಚಾಯತಿಗಳಿಗೆ ಪ್ರಶಸ್ತಿ ಹಣವನ್ನು ನೀಡಲಾಗುತ್ತಿದೆ; (ಸ್ಪಷ್ಟ ನಿಲುವನ್ನು ತಿಳಿಸುವುದು) | |
| (ಉ) | 2019-20 ಮತ್ತು 2020-21ನೇ ಸಾಲಿನಲ್ಲಿ ಗಾಂಧಿಗ್ರಾಮ ಪ್ರಶಸ್ತಿಗೆ ಭಾಜನವಾದ ಕಲ್ಯಾಣ ಕರ್ನಾಟಕದ ಗ್ರಾಮ ಪಂಚಾಯಿತಿಗಳು ಎಷ್ಟು; ಅವು ಯಾವುವು? | |

ಸಂಖ್ಯೆ: ಗ್ರಾಅಪ 359 ಗ್ರಾಪಂಅ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಬಿಡುಗಡೆಯಾದ ಅಂಕಿಅಂಶದ ಉತ್ತರ ಗುರುತಿಸಿದ ಪ್ರಶ್ನೆ ಸಂಖ್ಯೆ - 553ಕ್ಕೆ

ಅನುಬಂಧ

**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:-** 2020-21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿರುವ ಬಗ್ಗೆ.

**ಉಲ್ಲೇಖ:-** 1) ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರ ಸಂಖ್ಯೆ: ಕಪಂರಾಅ/ಅಭಿವೃದ್ಧಿ/238/2021, ದಿ:29.07.2021, 13.08.2021, 18.08.2021 ಮತ್ತು 04.09.2021

2) ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಪತ್ರ ಸಂಖ್ಯೆ: ಕಪಂರಾಅ/ಅಭಿವೃದ್ಧಿ/446/2021 ದಿನಾಂಕ:10.01.2022.

3) ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿಪಿಆರ್/188/ಜಿಪಿಎಸ್/2021, ದಿನಾಂಕ:22.02.2022.

4) ರಾಜ್ಯ ಮಟ್ಟದ ಪರಾಮರ್ಶೆ ಸಮಿತಿ ಸಭೆಯ ನಡವಳಿ ದಿನಾಂಕ:18.04.2022.

*****

**ಪ್ರಸ್ತಾವನೆ:**

ಗ್ರಾಮ ಪಂಚಾಯಿತಿಗಳು ಸ್ಥಳೀಯ ಮಟ್ಟದಲ್ಲಿ ಸ್ವಯಂ ಆಡಳಿತ ಸಂಸ್ಥೆಗಳಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕೆಂಬ ಸದುದ್ದೇಶದಿಂದ ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಗ್ರಾಮ ಪಂಚಾಯಿತಿಗಳನ್ನು ಪ್ರೋತ್ಸಾಹಿಸಲು 2013-14ನೇ ಸಾಲಿನಿಂದ ಪ್ರತಿ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಯನ್ನು ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಿ ರೂ.5.00 ಲಕ್ಷಗಳ ಪ್ರೋತ್ಸಾಹ ಧನ ನೀಡಿ ಗೌರವಿಸಲಾಗುತ್ತಿದೆ.

2020-21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡುವ ಸಂಬಂಧ 250 ಅಂಕಗಳ ಪ್ರಶ್ನಾವಳಿಗಳನ್ನು Google Form ತಂತ್ರಾಂಶದಿಂದ ಉತ್ತರಿಸುವ ಮೂಲಕ ರಾಜ್ಯದ ಗ್ರಾಮ ಪಂಚಾಯತಿಗಳಿಂದ ಅರ್ಜಿಗಳನ್ನು ಉಲ್ಲೇಖ(1)ರ ಪತ್ರಗಳನ್ವಯ ಆಹ್ವಾನಿಸಲಾಗಿರುತ್ತದೆ. ಅದರಂತೆ ರಾಜ್ಯದ ಗ್ರಾಮ ಪಂಚಾಯತಿಗಳು ಅರ್ಜಿ ಸಲ್ಲಿಸಿದ್ದು, ಈ ಗ್ರಾಮ ಪಂಚಾಯತಿಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿರುವ ತಾಲ್ಲೂಕಿಗೆ ಐದು ಗ್ರಾಮ ಪಂಚಾಯತಿಗಳನ್ನು ಪ್ರಾಥಮಿಕ ಹಂತದಲ್ಲಿ ಆಯ್ಕೆ ಮಾಡಿ, ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಲಾಗಿತ್ತು. ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದ ತಂಡವು ಮಾರ್ಗಸೂಚಿಗಳನುಸಾರ ಸ್ಥಳ/ದಾಖಲೆಗಳನ್ನು ಪರಿಶೀಲನೆ ಮಾಡಿ, ವರದಿಯನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸಲಾಗಿ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದ ಆಯ್ಕೆ ಸಮಿತಿಯು ದಿನಾಂಕ:29.11.2021ರ ಆರ್ಥಿಕ ಇಲಾಖೆಯ ಹಿಂಬರಹ ಹಾಗೂ ಉಲ್ಲೇಖ(2)ರ ಪತ್ರದನ್ವಯ ಹಳೆಯ 176 ತಾಲ್ಲೂಕುಗಳಿಗೆ ಮಿತಿಗೊಳಿಸಿ, ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ಗಾಂಧಿ ಗ್ರಾಮ ಪುರಸ್ಕಾರಕ್ಕಾಗಿ ಆಯ್ಕೆ ಮಾಡಿ ಶಿಫಾರಸ್ಸು ಮಾಡಿರುತ್ತದೆ.

ಅದರಂತೆ, ಪ್ರಸ್ತುತ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದ ಆಯ್ಕೆ ಸಮಿತಿಯ ಮೂಲಕ ಶಿಫಾರಸ್ಸು ಮಾಡಲಾದ ಪ್ರತಿ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ದಿನಾಂಕ:18.04.2022 ರಂದು ನಡೆದ ರಾಜ್ಯ ಮಟ್ಟದ ಪರಾಮರ್ಶೆ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದಿಸಿ 2020-21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿರುತ್ತದೆ. ಆಯ್ಕೆಯಾದ ಪ್ರತಿ ಗ್ರಾಮ ಪಂಚಾಯಿತಿಗೆ 2021-22ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ಅಗ್ರ ಪ್ರಶಸ್ತಿ ಲೆಕ್ಕ ಶೀರ್ಷಿಕೆ: 2515-00-102-0-11 ಅಡಿ ಒದಗಿಸಿದ ಪ್ರಸ್ತುತ ಎಸ್.ಬಿ.ಐ. ಬ್ಯಾಂಕ್ ಖಾತೆ ಸಂಖ್ಯೆ: 64062923099 ಯಲ್ಲಿರಿಸಿದ ರೂ.8.80 ಕೋಟಿ ಅನುದಾನದಲ್ಲಿ ರೂ.5.00 ಲಕ್ಷಗಳಂತೆ ಪ್ರಶಸ್ತಿ ಹಣ ನೀಡಿ ಗೌರವಿಸಲು ನಿರ್ಧರಿಸಲಾಗಿದೆ. ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:KPRC-DEV/335/20222, ಬೆಂಗಳೂರು, ದಿನಾಂಕ:21.09.2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದ ಆಯ್ಕೆ ಸಮಿತಿಯ ಮೂಲಕ ಶಿಫಾರಸ್ಸು ಮಾಡಲಾದ ಪ್ರತಿ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ಅನುಬಂಧ-1ರಂತೆ ರಾಜ್ಯ ಮಟ್ಟದ ಪರಾಮರ್ಶೆ ಸಮಿತಿ ಸಭೆಯಲ್ಲಿ ಅನುಮೋದಿಸಿ, 2020-21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕಾಗಿ ಆಯ್ಕೆ ಮಾಡಿ, ಎಸ್.ಬಿ.ಐ. ಬ್ಯಾಂಕ್ ಖಾತೆ ಸಂಖ್ಯೆ: 64062923099, ವಿಧಾನಸೌಧ ಶಾಖೆ, ಬೆಂಗಳೂರು ಮೂಲಕ ಪ್ರತಿ ಗ್ರಾಮ ಪಂಚಾಯಿತಿಗೆ ರೂ.5.00 ಲಕ್ಷಗಳಂತೆ ಒಟ್ಟು ರೂ.8.80 ಕೋಟಿ (ಎಂಟು ಕೋಟಿ ಎಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.

**(ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು (ಪಂ.ರಾಜ್)**
**ಇವರಿಂದ ಅನುಮೋದಿಸಲ್ಪಟ್ಟಿದೆ)**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಬಿ.ಅಂಜನಪ್ಪ) 21/9/22
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
21/9/22

**ಇವರಿಗೆ,**

1. ಮಹಾ ಲೇಖಪಾಲರು, ಕರ್ನಾಟಕ, ಬೆಂಗಳೂರು
2. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
3. ಉಪ ನಿರ್ದೇಶಕರು, ರಾಜ್ಯ ಖಜಾನೆ ಗಣಕ ಕೋಶ, ಖನಿಜ ಭವನ, ಬೆಂಗಳೂರು
4. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-6, ವಿಧಾನ ಸೌಧ, ಬೆಂಗಳೂರು
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
6. ಜಂಟಿ ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
7. ನಿರ್ದೇಶಕರು (ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

## ಅನುಬಂಧ-1
## ಸರ್ಕಾರದ ಆದೇಶ ಸಂಖ್ಯೆ:KPRC-DEV/335/2022, ಬೆಂಗಳೂರು, ದಿನಾಂಕ:21.09.2022.

| 2020-21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಮ ಪಂಚಾಯತಿಗಳು | | | | |
|---|---|---|---|---|
| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಕ್ರ. ಸಂ. | ಗ್ರಾಮ ಪಂಚಾಯಿತಿ |
| 1 | ಬಾಗಲಕೋಟೆ | ಬದಾಮಿ | 1 | ಕಟಗೇರಿ |
| | ಬಾಗಲಕೋಟೆ | ಬಾಗಲಕೋಟೆ | 2 | ಕಲಾದಗಿ |
| | ಬಾಗಲಕೋಟೆ | ಬೀಳಗಿ | 3 | ಹೆಗ್ಗೂರ |
| | ಬಾಗಲಕೋಟೆ | ಹುನಗುಂದ | 4 | ಧನ್ನೂರ |
| | ಬಾಗಲಕೋಟೆ | ಜಮಖಂಡಿ | 5 | ಹುಲ್ಯಾಳ |
| | ಬಾಗಲಕೋಟೆ | ಮುಧೋಳ | 6 | ಮಂಟೂರ |
| 2 | ಬಳ್ಳಾರಿ | ಬಳ್ಳಾರಿ | 7 | ಶಿಡಗಿನಮೊಳ |
| | ಬಳ್ಳಾರಿ | ಸಿರಗುಪ್ಪ | 8 | ಕುಡದರಹಾಳ್ |
| | ಬಳ್ಳಾರಿ | ಸಂಡೂರು | 9 | ತೋರಣಗಲ್ಲು |
| 3 | ಬೆಳಗಾವಿ | ಅಥಣಿ | 10 | ಶಿರಗುಪ್ಪಿ |
| | ಬೆಳಗಾವಿ | ಬೈಲಹೊಂಗಲ | 11 | ಅಂಬಡಗಟ್ಟಿ |
| | ಬೆಳಗಾವಿ | ಬೆಳಗಾವಿ | 12 | ಬೆನಕನಹಳ್ಳಿ |
| | ಬೆಳಗಾವಿ | ಚಿಕ್ಕೋಡಿ | 13 | ಶಮನೇವಾಡಿ |
| | ಬೆಳಗಾವಿ | ಗೋಕಾಕ | 14 | ತವಗ |
| | ಬೆಳಗಾವಿ | ಹುಕ್ಕೇರಿ | 15 | ಶಹಾಬಂದರ |
| | ಬೆಳಗಾವಿ | ಖಾನಾಪುರ | 16 | ನಂದಗಡ |
| | ಬೆಳಗಾವಿ | ರಾಮದುರ್ಗ | 17 | ಗೊಡಚಿ |
| | ಬೆಳಗಾವಿ | ರಾಯಬಾಗ | 18 | ನಂದಿಕುರಳಿ |
| | ಬೆಳಗಾವಿ | ಸವದತ್ತಿ | 19 | ಗೊರವನಕೊಳ್ಳ |
| 4 | ಬೆಂಗಳೂರು (ನ) | ಆನೇಕಲ್ | 20 | ಹೆನ್ನಾಗರ |
| | ಬೆಂಗಳೂರು (ನ) | ಬೆಂಗಳೂರು ದಕ್ಷಿಣ | 21 | ತರಳು |
| | ಬೆಂಗಳೂರು (ನ) | ಬೆಂಗಳೂರು ಉತ್ತರ | 22 | ಸಿಂಗನಾಯಕನಹಳ್ಳಿ |
| | ಬೆಂಗಳೂರು (ನ) | ಬೆಂಗಳೂರು ಪೂರ್ವ | 23 | ಮಂಡೂರು |
| 5 | ಬೆಂಗಳೂರು (ಗ್ರಾ) | ದೇವನಹಳ್ಳಿ | 24 | ಬಿದಲೂರು |
| | ಬೆಂಗಳೂರು (ಗ್ರಾ) | ದೊಡ್ಡಬಳ್ಳಾಪುರ | 25 | ಹೆಗ್ಗಡಿಹಳ್ಳಿ |
| | ಬೆಂಗಳೂರು (ಗ್ರಾ) | ಹೊಸಕೋಟೆ | 26 | ಮುತ್ಸಂದ್ರ |
| | ಬೆಂಗಳೂರು (ಗ್ರಾ) | ನೆಲಮಂಗಲ | 27 | ಕಳಲುಘಟ್ಟ |

8. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
9. ಪ್ರಧಾನ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನ ಸೌಧ ಶಾಖೆ, ಬೆಂಗಳೂರು
10. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು (ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
11. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

**ಪ್ರತಿಮಾಹಿತಿಗಾಗಿ,**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಇವರ ಆಪ್ತ ಸಹಾಯಕರು, ಬೆಂಗಳೂರು.
4. ಕರ್ನಾಟಕ ವಿಕಾಸ-ಪ್ರಕಟಣೆಗಾಗಿ
5. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು
6. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

**ಅನುಬಂಧ-1**

**ಸರ್ಕಾರದ ಆದೇಶ ಸಂಖ್ಯೆ:KPRC-DEV/335/2022, ಬೆಂಗಳೂರು, ದಿನಾಂಕ:21.09.2022.**

| | | | | |
|---|---|---|---|---|
| 6 | ಬೀದರ್ | ಔರಾದ | 28 | ಡೋಣಗಾಂವ(ಎಂ) |
| | ಬೀದರ್ | ಬಸವಕಲ್ಯಾಣ | 29 | ಮುಚಳಂಬ |
| | ಬೀದರ್ | ಭಾಲ್ಕಿ | 30 | ಹಲಬರ್ಗಾ |
| | ಬೀದರ್ | ಬೀದರ | 31 | ನಾಗೊರಾ |
| | ಬೀದರ್ | ಹುಮನಾಬಾದ | 32 | ಚಂದನಹಳ್ಳಿ |
| 7 | ಚಾಮರಾಜನಗರ | ಚಾಮರಾಜನಗರ | 33 | ಅರಕಲವಾಡಿ |
| | ಚಾಮರಾಜನಗರ | ಗುಂಡ್ಲುಪೇಟೆ | 34 | ಸೋಮಹಳ್ಳಿ |
| | ಚಾಮರಾಜನಗರ | ಕೊಳ್ಳೇಗಾಲ | 35 | ಸೂಳೇರಿಪಾಳ್ಯ |
| | ಚಾಮರಾಜನಗರ | ಯಳಂದೂರು | 36 | ಗುಂಬಳ್ಳಿ |
| 8 | ಚಿಕ್ಕಬಳ್ಳಾಪುರ | ಗುಡಿಬಂಡೆ | 37 | ಬೀಚಗಾನಹಳ್ಳಿ |
| | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 38 | ಕುಪ್ಪಹಳ್ಳಿ |
| | ಚಿಕ್ಕಬಳ್ಳಾಪುರ | ಗೌರಿಬಿದನೂರು | 39 | ವಾಟದಹೊಸಹಳ್ಳಿ |
| | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ | 40 | ಆನೂರು |
| | ಚಿಕ್ಕಬಳ್ಳಾಪುರ | ಚಿಂತಾಮಣಿ | 41 | ಕೋನಪಲ್ಲಿ |
| | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 42 | ಸೋಮನಾಥಪುರ |
| 9 | ಚಿಕ್ಕಮಗಳೂರು | ಚಿಕ್ಕಮಗಳೂರು | 43 | ಶಿರವಾಸೆ |
| | ಚಿಕ್ಕಮಗಳೂರು | ಕಡೂರು | 44 | ಯಳ್ಳಂಬಳಸೆ |
| | ಚಿಕ್ಕಮಗಳೂರು | ಕೊಪ್ಪ | 45 | ಮರಿತೊಟ್ಲು |
| | ಚಿಕ್ಕಮಗಳೂರು | ಮೂಡಿಗೆರೆ | 46 | ಸುಂಕಸಾಲೆ |
| | ಚಿಕ್ಕಮಗಳೂರು | ನರಸಿಂಹರಾಜಪುರ | 47 | ಹೊನ್ನೆಕೊಡಿಗೆ |
| | ಚಿಕ್ಕಮಗಳೂರು | ಶೃಂಗೇರಿ | 48 | ಮೆಣಸೆ |
| | ಚಿಕ್ಕಮಗಳೂರು | ತರೀಕೆರೆ | 49 | ತ್ಯಾಗದಕಟ್ಟೆ |
| 10 | ಚಿತ್ರದುರ್ಗ | ಚಿತ್ರದುರ್ಗ | 50 | ಚೋಳಗಟ್ಟ |
| | ಚಿತ್ರದುರ್ಗ | ಚಳ್ಳಕೆರೆ | 51 | ಸಾಣಿಕೆರೆ |
| | ಚಿತ್ರದುರ್ಗ | ಹಿರಿಯೂರು | 52 | ಜವನಗೊಂಡನಹಳ್ಳಿ |
| | ಚಿತ್ರದುರ್ಗ | ಹೊಳಲ್ಕೆರೆ | 53 | ಹೆಚ್.ಡಿ.ಪುರ |
| | ಚಿತ್ರದುರ್ಗ | ಹೊಸದುರ್ಗ | 54 | ಕಂಗುವಳ್ಳಿ |
| | ಚಿತ್ರದುರ್ಗ | ಮೊಳಕಾಲ್ಮೂರು | 55 | ತಮ್ಮೇನಹಳ್ಳಿ |
| 11 | ದಕ್ಷಿಣ ಕನ್ನಡ | ಮಂಗಳೂರು | 56 | **ಮುನ್ನೂರು ** |
| | ದಕ್ಷಿಣ ಕನ್ನಡ | ಬಂಟ್ವಾಳ | 57 | ಇರ್ವತ್ತೂರು |
| | ದಕ್ಷಿಣ ಕನ್ನಡ | ಬೆಳ್ತಂಗಡಿ | 58 | ಮಡಂತ್ಯಾರು |
| | ದಕ್ಷಿಣ ಕನ್ನಡ | ಪುತ್ತೂರು | 59 | ಆರ್ಯಾಪು |
| | ದಕ್ಷಿಣ ಕನ್ನಡ | ಸುಳ್ಯ | 60 | ಸಂಪಾಜೆ |

**ಅನುಬಂಧ-1**

**ಸರ್ಕಾರದ ಆದೇಶ ಸಂಖ್ಯೆ:KPRC-DEV/335/2022, ಬೆಂಗಳೂರು, ದಿನಾಂಕ:21.09.2022.**

| | | | | |
|---|---|---|---|---|
| 12 | ದಾವಣಗೆರೆ | ದಾವಣಗೆರೆ | 61 | ಕುರ್ಕಿ |
| | ದಾವಣಗೆರೆ | ಹರಿಹರ | 62 | ಬೆಳ್ಳೂಡಿ |
| | ದಾವಣಗೆರೆ | ಚನ್ನಗಿರಿ | 63 | ನಲ್ಲೂರು |
| | ದಾವಣಗೆರೆ | ಹೊನ್ನಾಳಿ | 64 | ಚೀಲೂರು |
| | ದಾವಣಗೆರೆ | ಜಗಳೂರು | 65 | ಬಿದರಕೆರೆ |
| 13 | ಧಾರವಾಡ | ಧಾರವಾಡ | 66 | ಅಮ್ಮಿನಬಾವಿ |
| | ಧಾರವಾಡ | ಹುಬ್ಬಳ್ಳಿ | 67 | ಅಂಚಟಗೇರಿ |
| | ಧಾರವಾಡ | ಕಲಘಟಗಿ | 68 | ಮುಕ್ಕಲ |
| | ಧಾರವಾಡ | ಕುಂದಗೋಳ | 69 | ಮಳಲಿ |
| | ಧಾರವಾಡ | ನವಲಗುಂದ | 70 | ಯಮನೂರ |
| 14 | ಗದಗ | ಗದಗ | 71 | ಹರ್ತಿ |
| | ಗದಗ | ಮುಂಡರಗಿ | 72 | ಕೋರ್ಲಹಳ್ಳಿ |
| | ಗದಗ | ನರಗುಂದ | 73 | ಹುಣಶಿಕಟ್ಟಿ |
| | ಗದಗ | ರೋಣ | 74 | ಮಲ್ಲಾಪೂರ |
| | ಗದಗ | ಶಿರಹಟ್ಟಿ | 75 | ಬೆಳ್ಳಟ್ಟಿ |
| 15 | ಹಾಸನ | ಆಲೂರು | 76 | ಕದಾಳು |
| | ಹಾಸನ | ಅರಕಲಗೂಡು | 77 | ಕಟ್ಟೇಪುರ |
| | ಹಾಸನ | ಅರಸೀಕೆರೆ | 78 | ಹಿರಿಯೂರು |
| | ಹಾಸನ | ಬೇಲೂರು | 79 | ಅಂದಲೆ |
| | ಹಾಸನ | ಚನ್ನರಾಯಪಟ್ಟಣ | 80 | ನಲ್ಲೂರು |
| | ಹಾಸನ | ಹಾಸನ | 81 | ಹರಳಹಳ್ಳಿ |
| | ಹಾಸನ | ಹೊಳೇನರಸೀಪುರ | 82 | ಶ್ರವಣೂರು |
| | ಹಾಸನ | ಸಕಲೇಶಪುರ | 83 | ಬಿರಡಹಳ್ಳಿ |
| 16 | ಹಾವೇರಿ | ಬ್ಯಾಡಗಿ | 84 | ಹೆಡಿಗ್ಗೊಂಡ |
| | ಹಾವೇರಿ | ಹಾನಗಲ್ | 85 | ಡೊಳ್ಳೇಶ್ವರ |
| | ಹಾವೇರಿ | ಹಾವೇರಿ | 86 | ಬೂದಗಟ್ಟಿ |
| | ಹಾವೇರಿ | ಹಿರೆಕೇರೂರ | 87 | ಕಡೂರು |
| | ಹಾವೇರಿ | ರಾಣೆಬೆನ್ನೂರ | 88 | ಮಾಳನಾಯಕನಹಳ್ಳಿ |
| | ಹಾವೇರಿ | ಸವಣೂರ | 89 | ಯಲವಿಗಿ |
| | ಹಾವೇರಿ | ಶಿಗ್ಗಾಂವ | 90 | ಎಂ.ಎನ್.ತಡಸ |

**ಅನುಬಂಧ-1**

**ಸರ್ಕಾರದ ಆದೇಶ ಸಂಖ್ಯೆ:KPRC-DEV/335/2022, ಬೆಂಗಳೂರು, ದಿನಾಂಕ:21.09.2022.**

| | | | | |
|---|---|---|---|---|
| 17 | ಕಲಬುರಗಿ | ಅಫಜಲಪುರ | 91 | ಮಣೂರ |
| | ಕಲಬುರಗಿ | ಆಳಂದ | 92 | ಪಡಸಾವಳಗಿ |
| | ಕಲಬುರಗಿ | ಚಿಂಚೋಳಿ | 93 | ಸುಲೇಪೇಠ |
| | ಕಲಬುರಗಿ | ಚಿತ್ತಾಪೂರ | 94 | ರಾವೂರ |
| | ಕಲಬುರಗಿ | ಜೇವರ್ಗಿ | 95 | ಮದರಿ |
| | ಕಲಬುರಗಿ | ಕಲಬುರಗಿ | 96 | ಭೀಮಳ್ಳಿ |
| | ಕಲಬುರಗಿ | ಸೇಡಂ | 97 | ಇಟಕಾಲ |
| 18 | ಕೊಡಗು | ಮಡಿಕೇರಿ | 98 | ಹೊದ್ದೂರು |
| | ಕೊಡಗು | ಸೋಮವಾರಪೇಟೆ | 99 | ಮುಳ್ಳುಸೋಗೆ |
| | ಕೊಡಗು | ವಿರಾಜಪೇಟೆ | 100 | ಪೊನ್ನಂಪೇಟೆ |
| 19 | ಕೋಲಾರ | ಕೋಲಾರ | 101 | ವಕ್ಕಲೇರಿ |
| | ಕೋಲಾರ | ಮಾಲೂರು | 102 | ಕೆ.ಜಿ.ಹಳ್ಳಿ |
| | ಕೋಲಾರ | ಬಂಗಾರಪೇಟೆ | 103 | ಚಿಕ್ಕ ಅಂಕಂಡಹಳ್ಳಿ |
| | ಕೋಲಾರ | ಮುಳಬಾಗಿಲು | 104 | ಹೆಬ್ಬಣಿ |
| | ಕೋಲಾರ | ಶ್ರೀನಿವಾಸಪುರ | 105 | ಮುದಿಮಡಗು |
| 20 | ಕೊಪ್ಪಳ | ಕೊಪ್ಪಳ | 106 | ಹಿಟ್ನಾಳ |
| | ಕೊಪ್ಪಳ | ಗಂಗಾವತಿ | 107 | ಮುಸ್ಟೂರು |
| | ಕೊಪ್ಪಳ | ಯಲಬುರ್ಗಾ | 108 | ತುಮ್ಮರಗುದ್ದಿ |
| | ಕೊಪ್ಪಳ | ಕುಷ್ಟಗಿ | 109 | ಹನುಮಸಾಗರ |
| 21 | ಮಂಡ್ಯ | ಕೆ.ಆರ್.ಪೇಟೆ | 110 | ಬೂಕಿನಕೆರೆ |
| | ಮಂಡ್ಯ | ಮದ್ದೂರು | 111 | ಗೊರವನಹಳ್ಳಿ |
| | ಮಂಡ್ಯ | ಮಳವಳ್ಳಿ | 112 | ರಾಗಿಬೊಮ್ಮನಹಳ್ಳಿ |
| | ಮಂಡ್ಯ | ಮಂಡ್ಯ | 113 | ಗೋಪಾಲಪುರ |
| | ಮಂಡ್ಯ | ನಾಗಮಂಗಲ | 114 | ದೇವಲಾಪುರ |
| | ಮಂಡ್ಯ | ಪಾಂಡವಪುರ | 115 | ಚಿನಕುರಳಿ |
| | ಮಂಡ್ಯ | ಶ್ರೀರಂಗಪಟ್ಟಣ | 116 | ಕೆ.ಶೆಟ್ಟಿಹಳ್ಳಿ |
| 22 | ಮೈಸೂರು | ಮೈಸೂರು | 117 | ನಾಗವಾಲ |
| | ಮೈಸೂರು | ನಂಜನಗೂಡು | 118 | ಹರದನಹಳ್ಳಿ |
| | ಮೈಸೂರು | ತಿ.ನರಸೀಪುರ | 119 | ಕಲಿಯೂರು |
| | ಮೈಸೂರು | ಹುಣಸೂರು | 120 | ಬಿಳಿಕೆರೆ |
| | ಮೈಸೂರು | ಕೆ.ಆರ್.ನಗರ | 121 | ಕಗ್ಗೆರೆ |
| | ಮೈಸೂರು | ಪಿರಿಯಾಪಟ್ಟಣ | 122 | ಹಿಟ್ನೇಹೆಬ್ಬಾಗಿಲು |
| | ಮೈಸೂರು | ಹೆಚ್.ಡಿ.ಕೋಟೆ | 123 | ಬಿ.ಮಟಕೆರೆ |

## ಅನುಬಂಧ-1

## ಸರ್ಕಾರದ ಆದೇಶ ಸಂಖ್ಯೆ:KPRC-DEV/335/2022, ಬೆಂಗಳೂರು, ದಿನಾಂಕ:21.09.2022.

| | | | | |
|---|---|---|---|---|
| 23 | ರಾಯಚೂರು | ಮಾನ್ವಿ | 124 | ತೋರಣದಿನ್ನಿ |
| | ರಾಯಚೂರು | ರಾಯಚೂರು | 125 | ಚಂದ್ರಬಂಡಾ |
| | ರಾಯಚೂರು | ಲಿಂಗಸ್ಗೂರು | 126 | ನೀರಲಕೆರೆ |
| | ರಾಯಚೂರು | ಸಿಂಧನೂರು | 127 | ಸಾಲಗುಂದಾ |
| | ರಾಯಚೂರು | ದೇವದುರ್ಗ | 128 | ಅರಕೇರಾ |
| 24 | ರಾಮನಗರ | ಚನ್ನಪಟ್ಟಣ | 129 | ತಿಟ್ಟಮಾರನಹಳ್ಳಿ |
| | ರಾಮನಗರ | ಕನಕಪುರ | 130 | ಕೋಡಿಹಳ್ಳಿ |
| | ರಾಮನಗರ | ಮಾಗಡಿ | 131 | ಶ್ರೀಗಿರಿಪುರ |
| | ರಾಮನಗರ | ರಾಮನಗರ | 132 | ಬನ್ನಿಕುಪ್ಪೆ(ಬಿ) |
| 25 | ಶಿವಮೊಗ್ಗ | ಶಿವಮೊಗ್ಗ | 133 | ಹಾಡೋನಹಳ್ಳಿ |
| | ಶಿವಮೊಗ್ಗ | ಭದ್ರಾವತಿ | 134 | ಅರಬಿಳಚಿ |
| | ಶಿವಮೊಗ್ಗ | ತೀರ್ಥಹಳ್ಳಿ | 135 | ನೆರಟೂರು |
| | ಶಿವಮೊಗ್ಗ | ಸಾಗರ | 136 | ಕೆಳದಿ |
| | ಶಿವಮೊಗ್ಗ | ಹೊಸನಗರ | 137 | ಹುಂಚಾ |
| | ಶಿವಮೊಗ್ಗ | ಶಿಕಾರಿಪುರ | 138 | ತೊಗರ್ಸಿ |
| | ಶಿವಮೊಗ್ಗ | ಸೊರಬ | 139 | ತಲಗುಂದ |
| 26 | ತುಮಕೂರು | ಚಿಕ್ಕನಾಯಕಹಳ್ಳಿ | 140 | ಜೆ.ಸಿ.ಪುರ |
| | ತುಮಕೂರು | ಗುಬ್ಬಿ | 141 | ಸಿ.ಎಸ್.ಪುರ |
| | ತುಮಕೂರು | ಕೊರಟಗೆರೆ | 142 | ತುಂಬಾಡಿ |
| | ತುಮಕೂರು | ಕುಣಿಗಲ್ | 143 | ಸಂತೆಮಾವತ್ತೂರು |
| | ತುಮಕೂರು | ಮಧುಗಿರಿ | 144 | ಚಿಕ್ಕಮಾಲೂರು |
| | ತುಮಕೂರು | ಪಾವಗಡ | 145 | ಸಾಸಲುಕುಂಟೆ |
| | ತುಮಕೂರು | ಶಿರಾ | 146 | ಕೊಟ್ಟ |
| | ತುಮಕೂರು | ತಿಪಟೂರು | 147 | ಕರಡಿ |
| | ತುಮಕೂರು | ತುಮಕೂರು | 148 | ಮೈದಾಳ |
| | ತುಮಕೂರು | ತುರುವೆಕೆರೆ | 149 | ಅಮ್ಮಸಂದ್ರ |
| 27 | ಉಡುಪಿ | ಉಡುಪಿ | 150 | 80ಬಡಗುಬೆಟ್ಟು |
| | ಉಡುಪಿ | ಕುಂದಾಪುರ | 151 | ಹೊಸಾಡು |
| | ಉಡುಪಿ | ಕಾರ್ಕಳ | 152 | ಕಲ್ಯಾ |

## ಅನುಬಂಧ-1

**ಸರ್ಕಾರದ ಆದೇಶ ಸಂಖ್ಯೆ:KPRC-DEV/335/2022, ಬೆಂಗಳೂರು, ದಿನಾಂಕ:21.09.2022.**

| | | | | |
|---|---|---|---|---|
| 28 | ಉತ್ತರ ಕನ್ನಡ | ಕಾರವಾರ | 153 | ಅಸ್ನೋಟಿ |
| | ಉತ್ತರ ಕನ್ನಡ | ಅಂಕೋಲಾ | 154 | ಅವರ್ಸಾ |
| | ಉತ್ತರ ಕನ್ನಡ | ಕುಮಟಾ | 155 | ನಾಡುಮಾಸ್ಕೇರಿ |
| | ಉತ್ತರ ಕನ್ನಡ | ಹೊನ್ನಾವರ | 156 | ಚಂದಾವರ |
| | ಉತ್ತರ ಕನ್ನಡ | ಭಟ್ಕಳ | 157 | ಮಾವಿನಕುರ್ವೆ |
| | ಉತ್ತರ ಕನ್ನಡ | ಶಿರಸಿ | 158 | ಹುಲೇಕಲ್ |
| | ಉತ್ತರ ಕನ್ನಡ | ಸಿದ್ದಾಪುರ | 159 | ಅಣಲೇಬೈಲ್ |
| | ಉತ್ತರ ಕನ್ನಡ | ಯಲ್ಲಾಪುರ | 160 | ನಂದೊಳ್ಳಿ |
| | ಉತ್ತರ ಕನ್ನಡ | ಮುಂಡಗೋಡ | 161 | ಮಳಗಿ |
| | ಉತ್ತರ ಕನ್ನಡ | ಹಳಿಯಾಳ | 162 | ಬೆಳವಟಗಿ |
| | ಉತ್ತರ ಕನ್ನಡ | ಜೋಯಿಡಾ(ಸೂಪ) | 163 | ಅವೇಡಾ |
| 29 | ವಿಜಯನಗರ | ಹೊಸಪೇಟೆ | 164 | ಸುಗ್ಗೇನಹಳ್ಳಿ |
| | ವಿಜಯನಗರ | ಹಗರಿಬೊಮ್ಮನಹಳ್ಳಿ | 165 | ವೋರಗೇರೆ |
| | ವಿಜಯನಗರ | ಕೂಡ್ಲಿಗಿ | 166 | ಹೊಸಹಳ್ಳಿ |
| | ವಿಜಯನಗರ | ಹಡಗಲಿ | 167 | ಹೊಳಗುಂದಿ |
| | ವಿಜಯನಗರ | ಹರಪನಹಳ್ಳಿ | 168 | ಹಲುವಾಗಲು |
| 30 | ವಿಜಯಪುರ | ವಿಜಯಪುರ | 169 | ಸಿದ್ದಾಪೂರ(ಕೆ) |
| | ವಿಜಯಪುರ | ಬಸವನ ಬಾಗೇವಾಡಿ | 170 | ವಡವಡಗಿ |
| | ವಿಜಯಪುರ | ಮುದ್ದೇಬಿಹಾಳ | 171 | ಕವಡಿಮಟ್ಟಿ |
| | ವಿಜಯಪುರ | ಸಿಂದಗಿ | 172 | ಕೋರವಾರ |
| | ವಿಜಯಪುರ | ಇಂಡಿ | 173 | ತೆನ್ನಿಹಳ್ಳಿ |
| 31 | ಯಾದಗಿರಿ | ಶಹಾಪುರ | 174 | ನಾಗನಟಗಿ |
| | ಯಾದಗಿರಿ | ಸುರಪುರ | 175 | ಮುದ್ನೂರು.ಕೆ |
| | ಯಾದಗಿರಿ | ಯಾದಗಿರಿ | 176 | ಅನಪೂರ |

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದ ಆಯ್ಕೆ ಸಮಿತಿಯಲ್ಲಿ 2020-21ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಮಂಗಳೂರು ತಾಲ್ಲೂಕು, ಮುನ್ನೂರು ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಿರುವುದರ ಬಗ್ಗೆ ಕಿಲ್ಪಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮಾನ್ಯ ಉಚ್ಚ ನ್ಯಾಯಾಲಯದ W.P.NO.17839/2021 (LB-RES) ರಂತೆ ದಾವೆಯನ್ನು ದಾಖಲಿಸಿರುತ್ತಾರೆ. ಆದ್ದರಿಂದ ಸದರಿ ಗ್ರಾಮ ಪಂಚಾಯಿತಿಯ ಆಯ್ಕೆಯು ಘನ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

21/9/22

(ಕೆ.ಬಿ. ಅಂಜನಪ್ಪ)

ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

21/9/22